<u>ಎಸ್. ಎಫ್ ಎಸ್ ಪದವಿ ಪೂರ್ವ ಕಾಲೇಜಿನ ಕನ್ನಡ ರಾಜ್ಯೋತ್ಸವ ವರದಿ</u>

ಎಲ್ಲಾದರೂ ಇರು, ಎಂತಾದರೂ ಇರು,

ಎಂದೆಂದಿಗೂ ನೀ ಕನ್ನಡವಾಗಿರು ಎಂಬ ರಾಷ್ಟ್ರ ಕವಿ ಕುವೆಂಪು ಅವರ ವಾಕ್ಯದಂತೆ

ಎಸ್. ಎಫ್. ಎಸ್. ಪದವಿ ಪೂರ್ವ ಕಾಲೇಜಿನಲ್ಲಿ ದಿನಾಂಕ 01ನೇ ನವೆಂಬರ್ 2025 ರಂದು ಬಹಳ ಅರ್ಥಪೂರ್ಣರ್ಣವಾಗಿ 70 ನೇ ಕನ್ನಡ ರಾಜ್ಯೋತ್ಸವ ವನ್ನು ಆಚರಿಸಲಾಯಿತು.

ಈ ಕಾರ್ಯಕ್ರಮಕ್ಕೆ ಹೊಸ ಹೊಸ ಯೋಜನೆಗಳ ಹರಿಕಾರರು ಕಾಲೇಜಿನ ಗೌರವಾನ್ವಿತ ಪ್ರಾಂಶುಪಾಲರಾದ ವಂದನೀಯ ಗುರು ರೆವರೆಂಡ್ ಫಾದರ್ ಸ್ಟ್ಯಾನಿ ರೋಡ್ರಿಗಸ್ ಅವರು ಅಧ್ಯಕ್ಷರಾಗಿ ಕಾರ್ಯಕ್ರಮದ ಯಶಸ್ಸಿಗೆ ಕಾರಣ ರಾದರು.

ಅಧ್ಯಕ್ಷ ರಾದ ಸ್ಟ್ಯಾನಿ ರೋಡ್ರಿಗಸ್ ರವರು 70 ನೇ ಕನ್ನಡ ರಾಜ್ಯೋತ್ಸವದ ಧ್ವಜಾರೋಹಣ ನೇರವೇರಿಸಿದರು.ಇದೇ ವೇಳೆಯಲ್ಲಿ ಕನ್ನಡ ವಿಭಾಗದ ವತಿಯಿಂದ ನಡೆಸಿದ ಸ್ಪರ್ಧೆ ಗಳಲ್ಲಿ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು. ಅನಂತರ ವರ್ಣರಂಜಿತ ಸಾಂಸ್ಕೃತಿಕ ಕಾರ್ಯಕ್ರಮ ದಲ್ಲಿ ವೀರಗಾಸೆ ನೃತ್ಯ ಪ್ರದರ್ಶನ ಎಲ್ಲರ ಗಮನ ಸೆಳೆಯಿತು. ಹೆಣ್ಣು ಮಕ್ಕಳ ದೀಪ ನೃತ್ಯ ಎಲ್ಲ ರ ಮೆಚ್ಚುಗೆಗೆ ಪಾತ್ರವಾಯಿತು.

ಅಧ್ಯಕ್ಷರ ನುಡಿಯಲ್ಲಿ ಅವರು ಪ್ರತಿಯೊಬ್ಬರೂ ನಾಡು ನುಡಿ ಗೌರವಿಸಿ, ಕನ್ನಡ ನಾಡು ನಮಗೆ ಆಶ್ರಯವನ್ನು ನೀಡಿದೆ ಹಾಗಾಗಿ ಆಶ್ರಯ ನೀಡಿದ ನಾಡನ್ನು ನಾವೆಲ್ಲರೂ ಗೌರವಿಸಬೇಕು ಈ ನಾಡಿನ ನೆಲ, ಜಲ, ಗಾಳಿ ಸೇವಿಸುತ್ತಾ ಬದುಕುತ್ತಿದ್ದೇನೆ ಹಾಗಾಗಿ ಆ ನಾಡಿನ ಋಣವನ್ನು ತೀರಿಸುವ ಹೊಣೆ ನಮ್ಮದು ಕನ್ನಡವೇ ಸತ್ಯ, ಕನ್ನಡವೇ ನಿತ್ಯ ಎಂದು ಸಾರುವುದರ ಮೂಲಕ 70 ನೇ ಕನ್ನಡ ರಾಜ್ಯೋತ್ಸವದ ಮಹತ್ವವನ್ನು ತಮ್ಮ ಮಾತುಗಳಲ್ಲಿ ವಿವರಿಸಿದರು. ಈ ಕಾರ್ಯಕ್ರಮದ ಯಶಸ್ಸಿಗೆ ಕಾಲೇಜಿನ ಕನ್ನಡ ವಿಭಾಗದ ಉಪನ್ಯಾಸಕರು ಎಲ್ಲಾ ವಿಭಾಗದ ಉಪನ್ಯಾಸಕರು, ಕಛೇರಿ ಸಿಬ್ಬಂದಿಯವರು ಹಾಗೂ ವಿದ್ಯಾರ್ಥಿಗಳು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕಾರ ನೀಡಿ ಕಾರ್ಯಕ್ರಮ ದ ಯಶಸ್ಸಿಗೆ ಕಾರಣರಾದರು.